ವಿಶ್ವ ಜಲ ದಿನಾಚರಣೆ ಅಂಗವಾಗಿ ಕಾರ್ಯಕ್ರಮದಲ್ಲಿ ನೀರಿನ ಲಭ್ಯತೆ ಮತ್ತು ಬಳಕೆ ಬಗ್ಗೆ ಮಾಹಿತಿ ನೀಡುತ್ತಿದ್ದ ನಿಬ್ಬ, 'ಒಂದೇ ಒಂದು ಹನಿ ನೀರನ್ನು ಉತ್ಪಾದನೆ ಮಾಡುವ ತಂತ್ರಜ್ಞಾನ ಇನ್ನೂ ಬಂದಿಲ್ಲ. ಹೀಗಾಗಿ, ನೀರನ್ನು ಸದ್ಬಳಕೆ ಮಾಡಬೇಕು. ಅದಕ್ಕಾಗಿಯೇ ನಾನು ಪ್ರತಿದಿನ ಒಂದೇ ಒಂದು ಬಕೆಟ್ ಉಗುರು ಬೆಚ್ಚಗಿನ ನೀರಲ್ಲಿ ಸ್ನಾನ ಮಾಡ್ತೀನಿ' ಎಂದ.

ನಿಬ್ಬನ ಮಾತು ಮುಂದುವರೆಯುವಾಗಲೇ ಕೈ ಎತ್ತಿದ ಒಂಬತ್ತನೇ ತರಗತಿಯ ರಮೇಶ, 'ಸರ್ ನಾನೂ ಅಷ್ಟೆ. ಒಂದೇ ಬಕೆಟ್ ಬಿಸಿನೀರಲ್ಲಿ ಹದಿನೈದು ದಿನಕ್ಕೊಮ್ಮೆ ಸ್ನಾನ ಮಾಡ್ತೀನಿ!

***

ಸಮಾರಂಭದಲ್ಲಿ ತಮ್ಮ ಜಾಣ್ಮೆಯನ್ನು ಭಾಷಣದ ಮೂಲಕ ಪ್ರಚುರಪಡಿಸಲು ಮುಂದಾದ ರಮೇಶ, 'ಜೀವನವೇ ಒಂದು ಏಣಿ, ಕೆಲವರು ಅದನ್ನು ಹಿಡಿದುಕೊಂಡು ಮೇಲೆ ಏರುತ್ತಿರುತ್ತಾರೆ. ಉಳಿದವರು ಕೆಳಗೆ ಇಳಿಯುತ್ತಿರುತ್ತಾರೆ. ನಡುವೆ ಬಾಯಿ ಹಾಕಿದ ನಂಜ 'ಇಳಿಯುವವರಿಗೆ ಭೂಮಿ ಸಿಗುತ್ತೆ, ಏರುವವರಿಗೆ ಆಕಾಶ ಸಿಕ್ಕಲ್ಲ' ಎಂದ.

***

ಏಪ್ರಿಲ್ 1ರ ನಗೆ ದಿನದ ಸಲುವಾಗಿ ಆಯೋಜಿಸಿದ್ದ ನಗೆಕೂಟದಲ್ಲಿ ವಿಶ್ವನೊಡನೆ ಮಂಜನೂ ಹೋಗಿದ್ದ. ನಗೆ ಭಾಷಣಕಾರ ನರಸಿಂಹಯ್ಯರವರ ಮಾತುಗಳಿಗೆ ವಿಶ್ವ ಬಿದ್ದು ಬಿದ್ದು ಮನಸಾರೆ ನಗುತ್ತಿದ್ದ. ಆದರೆ ಮಂಜ ಗಂಭೀರವಾಗಿ ಕುಳಿತಿದ್ದ. ಇದನ್ನು ಕಂಡ ವಿಶ್ವ 'ಯಾಕೋ ಮಂಕು ಬಡಿದವನಂತೆ ಕೂತಿದ್ದಿ' ಅಂತ ಪ್ರಶ್ನಿಸಿದ. ಅದಕ್ಕೆ ಮಂಜ, 'ಭಾಷಣಕಾರರು ಏಪ್ರಿಲ್ ಫೂಲ್ ಮಾಡ್ತಾ ಅವ್ರೆ. ನಾನ್ ಫೂಲ್ ಆಗೊ ಮಗಾ ಅಲ್ಲವೇ ಅಲ್ಲ' ಎಂದ!

***




ನನ್ನ ಮೈಮೇಲೆ ಬರೆ ಹಾಕಿದ್ದು ನನ್ನ ಹೆಂಡ್ತಿ ಕಣ್ಲಾ!ಆದರೆ ವಿದ್ಯುತ್ ಬರೆ ಎದರು ಇದೇನ ದೊಡ್ಡದಲ್ಲಿ ಕಣೋ.....!!!

**ನಂಜ:** ಹೊಗಳಿಕೆಗೆ ಹಿಗ್ಗಿ ಹೀರೇಕಾಯಿ ಆಗದವರು ಇದ್ದಾರಾ?
**ಮಂಜ:** ನನ್ಹೆಂಡ್ತಿ ಇದಾಳಲ್ಲ.
**ನಂಜ:** ಅದ್ಯಾಗೆ?
**ಮಂಜ:** ಸಹಜ ಸುಂದರಿ ಅಂದರೂ ವಾರಕ್ಕೊಮ್ಮೆ ಬ್ಯೂಟಿ ಪಾರ್ಲರ್ ಹೋಗ್ತಾಳೆ.

***

**ನಂಜ:** ಗಂಡ ಸತ್ತ ಮೇಲೆ ಹೆಂಡತಿಗೆ ಬುದ್ಧಿ ಬರುತ್ತಂತೆ ಹೌದಾ?
**ಮಂಜ:** ಹಾಗಂತ ಎಷ್ಟೋ ಜನ ಹೋಗವ್ರೆ.

***

**ಮಂಜ:** ಜೀವನವೇ ಒಂದು ಆಟ ಅಂತಾರೆ. ಹಾಗಾದ್ರೆ ಜೀವನ ನಿನ್ ಪ್ರಕಾರ ಯಾವ್ ಆಟ?
**ನಂಜ:** ಕಾಸಾಟ

***

**ಮೇಷ್ಟ್ರು:** ಶಾರದಾ ಮಾತೆಯ ಕೃಪೆಯಿಂದ ನೀವೆಲ್ಲ ಪಾಸಾಗಲಿ ಎಂದು ಬಯಸುತ್ತೇನೆ.
**ಓರ್ವ ವಿದ್ಯಾರ್ಥಿ:** ಸೇಮ್ ಟು ಯೂ ಸರ್.

***

**ಮೇಷ್ಟ್ರು:** ಒತ್ತಕ್ಷರಗಳು ಮತ್ತು ದೀರ್ಘಾಕ್ಷರಗಳಿಗೆ ಗುರು ಹಾಕಬೇಕು. ಉಳಿದ ಅಕ್ಷರಗಳಿಗೆ ಲಘು ಹಾಕಬೇಕು.(ಈ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳುವ ವೇಳೆಗೆ ಫೋನ್ ಬಂತು. ಮಾತನಾಡಲು ಹೊರ ಹೋಗಿ ವಾಪಸ್ ಬಂದು ಪ್ರಶ್ನೆ ಕೇಳಿದರು. ಫೋನ್‌ನಲ್ಲಿ ಮಾತನಾಡಿದ ಗುಂಗಿನಲ್ಲೇ) 'ಗುರು ಹೇಗಿರಬೇಕು'?
**ವಿದ್ಯಾರ್ಥಿ ನಿಶಾಂತ್:** 'ಗುರು ಲಘುವಾಗಿ ಇರ್ಬಾರ್ದು ಅಷ್ಟೆ ಸರ್'!

ಗುಂಡನ ಮನೆಗೆ ಅವನ ಹೆಂಡತಿ ಕಡೆಯ ಸಂಬಂಧಿಕರು ಬಂದರು. ಮನೆಗೆ ಬಂದ ಅತಿಥಿಗಳಿಗೆ ಉಪಚಾರ ಮಾಡಲು ಹೆಂಡತಿ ಮುಂದಾದರೆ, ಅವರನ್ನು ಹೇಗೆ ಸಾಗಿ ಹಾಕುವುದು ಎಂದು ಗುಂಡ ಯೋಚಿಸುತ್ತಿದ್ದ. ಆಗ.. ಹೆಂಡತಿ, 'ರೀ... ಅತಿಥಿಗಳಿಗೆ ಹೊರಗಿನಿಂದ ಏನಾದರೂ ತೆಗೆದುಕೊಂಡು ಬನ್ನಿ' ಎಂದಳು. ಹೆಂಡತಿಯ ಮಾತು ಕೇಳಿ ಹೊರಗೆ ಬಂದ ಗುಂಡ, 'ಒಂದು ಟ್ಯಾಕ್ಸಿ ತಂದು ಮನೆ ಮುಂದೆ ನಿಲ್ಲಿಸಿ' ಸರಿ ಕಳಿಸು. ಎಲ್ಲರೂ ಬೇಗ ಮನೆಗೆ ಹೋಗಲಿ ಎಂದ!

–ಮನೋಜ್ ಆರ್., ಕೋಲಾರ

